UASB
LIBRARY
Newspaper Clippings
Pg .1 Saturday 18-12-2021 Jai Kisan




ಮಾರುಕಟ್ಟೆಗೆ ಉತ್ಪನ್ನ ಆವಕ ಇಳಿಮುಖ: ಸಾರ್ವಕಾಲಿಕ ಗರಿಷ್ಠ ದರ ದಾಖಲು

# ದ್ವಿತಳಿಯ ರೇಷ್ಮೆಗೂಡಿಗೆ ಬಂಪರ್ ಬೆಲೆ!

• ಆರ್. ಜಿತೇಂದ್ರ

ರಾಮನಗರ: ಏಷ್ಯಾದ ದೊಡ್ಡ ರೇಷ್ಮೆಗೂಡು ಮಾರುಕಟ್ಟೆ ಎಂಬ ಖ್ಯಾತಿಯ ಇಲ್ಲಿನ ಗೂಡು ಮಾರುಕಟ್ಟೆಯಲ್ಲಿ ರೇಷ್ಮೆಗೂಡಿಗೆ ಗರಿಷ್ಠ ದರದಲ್ಲಿ ಹರಾಜು ನಡೆದಿದೆ. ಬೆಳೆಗಾರರ ಮೊಗದಲ್ಲಿ ಮಂದಹಾಸ ಮೂಡಿದೆ.

ಗುರುವಾರ ದ್ವಿತಳಿಯ (ಬೈವೋಲ್ಟನ್) ಗೂಡು ಪ್ರತಿ ಕೆ.ಜಿ.ಗೆ ಗರಿಷ್ಠ ₹ 900ರವರೆಗೂ ಹರಾಜು ನಡೆಯಿತು. ಅಲ್ಲದೇ, 50ಕ್ಕೂ ಹೆಚ್ಚು ಲಾಟ್‌ಗಳು ಪ್ರತಿ ಕೆ.ಜಿ.ಗೆ ₹800ಕ್ಕೂ ಹೆಚ್ಚಿನ ದರಕ್ಕೆ ಹರಾಜಾದವು. ಗೂಡಿಗೆ ಈ ಪ್ರಮಾಣದ ಬೆಲೆ ಸಿಕ್ಕಿದ್ದು ಇದೇ ಮೊದಲು ಎನ್ನುತ್ತಾರೆ ರೇಷ್ಮೆ ಬೆಳೆಗಾರರು.

ಸಾಮಾನ್ಯವಾಗಿ ಚಳಿಗಾಲದಲ್ಲಿ ರೋಗಬಾಧೆ, ಹಿಪ್ಪುನೇರಳೆ ಸೊಪ್ಪಿನ ಇಳುವರಿ ಕುಂಠಿತದಿಂದಾಗಿ ರೇಷ್ಮೆಗೂಡು ಉತ್ಪಾದನೆಯೂ ಕುಸಿಯುತ್ತದೆ. ಇದರಿಂದ ಸಹಜವಾಗಿಯೇ ಗೂಡಿನ ಬೆಲೆ ಏರಿಕೆ ಆಗುತ್ತದೆ ಎನ್ನುತ್ತಾರೆ ರೈತರು.

ಕಳೆದ ವರ್ಷ ಇದೇ ಅವಧಿಯಲ್ಲಿ ಬೈವೋಲ್ಟನ್ ಗೂಡು ಪ್ರತಿ ಕೆ.ಜಿ.ಗೆ ₹500ರಿಂದ ₹ 550 ದರದಲ್ಲಿ ಮಾರಾಟ ಆಗಿತ್ತು. ಈ ಪ್ರತಿ ಕೆ.ಜಿ.ಗೆ ₹250ರಿಂದ ₹ 300ರಷ್ಟು ಏರಿಕೆ ಆಗಿದೆ. ಬೆಳೆಗಾರರ ಆದಾಯವೂ ದುಪ್ಪಟ್ಟಾಗಿದೆ.

ಕರ್ನಾಟಕದ ಜೊತೆಗೆ ನೆರೆಯ ಆಂಧ್ರಪ್ರದೇಶ, ತಮಿಳುನಾಡಿನಿಂದಲೂ ಇಲ್ಲಿಗೆ ಹೆಚ್ಚಿನ ಪ್ರಮಾಣದಲ್ಲಿ ದ್ವಿತಳಿ ಗೂಡು ಬರುತ್ತಿದೆ. ಸದ್ಯ ದಿನವೊಂದಕ್ಕೆ ಸರಾಸರಿ 11-12 ಟನ್‌ನಷ್ಟು ಗೂಡು ಮಾತ್ರ ಮಾರುಕಟ್ಟೆಗೆ ಬರುತ್ತಿದೆ.

ಹಳೇ ಮೈಸೂರು ಭಾಗದಲ್ಲಿ ಮಿಶ್ರ ತಳಿಯ (ಸಿ.ಬಿ) ಗೂಡನ್ನು ಹೆಚ್ಚಾಗಿ ಬೆಳೆಯಲಾಗುತ್ತಿದೆ.

ಬೇಸಿಗೆಯಲ್ಲಿ ಇಲ್ಲಿನ ಮಾರುಕಟ್ಟೆಗೆ ನಿತ್ಯ ಸರಾಸರಿ 25-30 ಟನ್‌ನಷ್ಟು ಗೂಡು ಬರುತ್ತದೆ.

ಈಗ ಈ ಪ್ರಮಾಣವು 3ರಿಂದ 4 ಟನ್‌ಗೆ ಇಳಿಕೆ ಆಗಿದೆ. ಇದರಿಂದ ಬೆಲೆಯೂ ಏರುತ್ತಿದೆ. ಪ್ರತಿ ಕೆ.ಜಿ. ಗೂಡಿಗೆ ಸರಾಸರಿ ₹650 ಧಾರಣೆ ಸಿಗುತ್ತಿದೆ.



ರಾಮನಗರದ ರೇಷ್ಮೆಗೂಡು ಮಾರುಕಟ್ಟೆ

**ದ್ವಿತಳಿ ರೇಷ್ಮೆಗೂಡಿಗೆ ಈ ದರ ಸಿಕ್ಕಿದ್ದು ಇದೇ ಮೊದಲು. ಬೆಳೆ ವಿಫಲ, ಸೊಪ್ಪಿನ ಉತ್ಪಾದನೆ ಕುಂಠಿತದಿಂದ ಸಂಕಷ್ಟದಲ್ಲಿರುವ ಬೆಳೆಗಾರರಿಗೆ ಇದರಿಂದ ಅನುಕೂಲ ಆಗಲಿದೆ**

**ರವಿ,** ರೇಷ್ಮೆ ಬೆಳೆಗಾರ, ರಾಮನಗರ

18-12-2021
Pv Pg 12

# Ecologists oppose changes to Biological Diversity Act, 2002

'Bill prioritises commercial trade at the cost of conserving biological resources'

SPECIAL CORRESPONDENT
NEW DELHI

Environmentalists have expressed concern over amendments to the Biological Diversity Act, 2002 on the grounds that it prioritises intellectual property and commercial trade at the expense of the Act's key aim of conserving biological resources.

Amendments to the Act were introduced as a Bill in the Lok Sabha by Environment Minister Bhupender Yadav on Thursday.

On Friday, Rajya Sabha member Jairam Ramesh, who also chairs the Parliament's Standing Committee on Science, Technology and Environment, wrote a letter to Lok Sabha Speaker Om Birla "protesting" his decision to refer the amended Bill to a select committee when the Bill ought to have been perused by a standing committee that had existing mandate to examine questions of science and environment.

The amended Bill was drafted in response to complaints by traditional Indian medicine practitioners, seed sector, and industry and researchers that the Biological Diversity Act, 2002.



**Little connect:** The changes do not increase the stake of local communities in sustainable growth, say ecologists. • FILE PHOTO

**Compliance Burden**

The bill was enacted for conservation of biological diversity and ensure fair and equitable sharing of the benefits arising out of the use of biological resources with indigenous and local communities, imposed a heavy "compliance burden" and made it hard to conduct collaborative research and investments and simplify patent application processes.

The text of the Bill also says that it proposes to "widen the scope of levying access and benefit sharing with local communities and for further conservation of biological resources."

The Bill seeks to exempt registered AYUSH medical practitioners and people accessing codified traditional knowledge, among others, from giving prior intimation to State biodiversity boards for accessing biological resources for certain purposes.

A statement from the Legal Initiative for Forest and Environment (LIFE) said the Bill would "undo all the efforts made in the last few years to implement the Biological Diversity Act."

There was not a "single provision in the proposed amendment to protect, conserve or increase the stake of local communities in the sustainable use and conservation of biodiversity."

LIFE said the amendments were done to "solely benefit" the AYUSH Ministry. The Bill in the current form would pave the way for "bio piracy" and would mean AYUSH manufacturing companies would no longer need to take approvals and thus defeat the purpose for which the Act was created in the first place.

18-12-2021
Hindu Pg 15

For more information visit
University Library Website
Web - uasbagrilibindia.org
E-mail- librarian@uasbangalore.edu.in

# State got nod to use 1,355 ha of forest land for non-forestry purposes in 5 years

## Forest clearances being given at an alarming rate, say environmentalists

K.C. DEEPIKA
BENGALURU

In the last five years, Karnataka got approval to use 1,355.25 hectares (ha) of forest land for non-forestry purpose under the Forest (Conservation) Act, 1980.

Responding to an unstarred question in the Lok Sabha recently, Minister of State in the Ministry of Environment, Forest and Climate Change, Ashwini Kumar Choubey said a total of 82,893.61 ha of forest land has been approved for non-forestry use under the Forest (Conservation) Act, 1980, from April 2016 to March 2021.

He further said that 206 proposals involving 4,118.109067 ha area within Protected Areas, including national parks and sanctuaries, have been recommended by the Standing Committee of National Board for Wildlife during 2020 and 2021.

The State/UT-wise approved areas for use of forest land for non-forestry purpose under the Act for Karnataka showed that it went up from 199.20 ha in 2016-17 to 326.52 ha in 2017-18. After 139.64 ha in 2018-19, it again increased to 390.12 ha in 2019-2020. In 2020-21, it was 299.78 ha.

In comparison, neighbouring Kerala had a total approved area of just 9.21 ha and Tamil Nadu 81.91 ha. However, Andhra Pradesh had 2,713.53 ha, Telangana 8209.32 ha, and Maharashtra, 3615.62 ha.

Among the States and UTs, Jammu and Kashmir had the least: 1.20 ha, all of which was approved in 2020-21. Madhya Pradesh had the highest, with 19638.41 ha being approved for diversion.

**Approved areas**



For non-forestry purpose in Karnataka

| | |
|---|---|
| 2016-17 | 199.20 ha |
| 2017-18 | 326.52 ha |
| 2018-19 | 139.64 ha |
| 2019-2020 | 390.12 ha |
| 2021-22 | 299.78 ha |
| **Total** | **1,355.26 ha** |

### Move criticised

This massive diversion has been criticised by environmentalists. "Approvals under the Act for non-forestry purposes should be allowed only as a stark exception. However, it is shocking to see that the forest clearances are being given at such a rate," said wildlife conservationist Giridhar Kulkarni.

> **Skewed policies and a colonial mindset are leading to environment degradation. Large scale projects are being pushed in the name of drinking water schemes.**
>
> T.V. RAMACHANDRA
> Centre for Ecological Sciences, IISc

The Ministry of Environment, Forest, and Climate Change, which has statutory and constitutional obligations to protect the forests, is giving clearances in the name of ease of doing business, which is really unfortunate, he added.

The percentage of Karnataka's forest area in comparison to its geographical area is admittedly lower than the all-India average, as well as the percentage recommended by the National Forest Policy, which is 33%.

Chief Minister Basavaraj Bommai, who had this year announced an "environment budget" to compensate the damages caused to the environment along with annual estimations of green areas in the State, had said that Karnataka has 43 lakh hectares of forest, which is 21.5%.

T.V. Ramachandra from the Centre for Ecological Sciences, Indian Institute of Science (IISc), said forests in the Western Ghats provide water security to peninsular India, which in turn provides food security. "Naturally, any diversion is going to lead to loss of water and hurt livelihoods of people. Wherever there is native forest, earnings are higher and pollinators are diverse, due to which yield is higher. That means we are threatening food security and water security," he said.

What we need now is natural capital accounting and valuation of ecosystem services, and to think about whether the diversions have better benefit than the ecosystem, he added. "Skewed policies and a colonial mindset are leading to environment degradation. Large scale projects are being pushed in the name of drinking water schemes," he said.

The purpose-wise details of proposals involving 50 ha or more area approved during 2016-17 to 2020-21 for the country showed that irrigation, mining and defence had the highest numbers. Dr. Ramachandra recommended taking advantage of technological advancements to plan projects, as well as looking at the cost people pay for calamities due to improper projects by way of loss of life and property.

# ಗೋಶಾಲೆಗಳಲ್ಲಿ ಗೋ ಉತ್ಪನ್ನ ತಯಾರಿ ತರಬೇತಿ

## ಕೊಲ್ಲಾಪುರ ಮಠದ ಗೋಶಾಲೆ, ವಿಜ್ಞಾನ ಕೇಂದ್ರಕ್ಕೆ ಪಶು ಸಂಗೋಪನೆ ಸಚಿವ ಪ್ರಭು ಚವ್ಹಾಣ್ ಭೇಟಿ

• **ಕನ್ನಡಪ್ರಭ ವಾರ್ತೆ** ಕೊಲ್ಲಾಪುರ

ರಾಜ್ಯದಲ್ಲಿನ ಗೋಶಾಲೆಗಳಲ್ಲಿ ಗೋವಿನ ಉತ್ಪನ್ನಗಳ ತಯಾರಿಕೆಗೆ ತರಬೇತಿ ನೀಡಿ ಗೋಶಾಲೆಗಳನ್ನು ಸ್ವಾವಲಂಬಿ ಮಾಡಲಾಗುವುದು ಎಂದು ಪಶುಸಂಗೋಪನಾ ಸಚಿವ ಪ್ರಭು ಚವ್ಹಾಣ್ ತಿಳಿಸಿದ್ದಾರೆ.

ಮಹಾರಾಷ್ಟ್ರದ ಕೊಲ್ಲಾಪುರದ ಸಿದ್ಧಗಿರಿ ಮಹಾಸಂಸ್ಥಾನದ ಕನ್ನೇರಿ ಮಠದ ಗೋಶಾಲೆ ಹಾಗೂ ಕೃಷಿ ವಿಜ್ಞಾನ ಕೇಂದ್ರಕ್ಕೆ ಶುಕ್ರವಾರ ಭೇಟಿ ನೀಡಿ ಕಾಡಸಿದ್ದೇಶ್ವರ ಸ್ವಾಮೀಜಿಯವರ ಜತೆ ಚರ್ಚಿಸಿದ ಬಳಿಕ ಅವರು ಮಾಧ್ಯಮಗಳೊಂದಿಗೆ ಮಾತನಾಡಿದರು.


ಕೊಲ್ಲಾಪುರದ ಗೋಶಾಲೆಗೆ ಭೇಟಿ ನೀಡಿದ್ದ ಪಶುಸಂಗೋಪನಾ ಸಚಿವ ಪ್ರಭು ಚವ್ಹಾಣ್

ಗೋವಿನ ಉತ್ಪನ್ನಗಳ ತಯಾರಿಕೆ ಹಾಗೂ ಕೃಷಿಯಲ್ಲಿ ಗೋವುಗಳ ಪಾತ್ರದ ಕುರಿತು ಪ್ರಾತ್ಯಕ್ಷಿಕೆಯೊಂದಿಗೆ ತರಬೇತಿ ಹಮ್ಮಿಕೊಳ್ಳಲಾಗುವುದು. ಆ ಮೂಲಕ ರಾಜ್ಯದ ಎಲ್ಲ ಗೋಶಾಲೆಗಳನ್ನು ಆರ್ಥಿಕವಾಗಿ ಸ್ವಾವಲಂಬಿ ಮಾಡಲಾಗುವುದು. ಇದರಿಂದ ಗೋವುಗಳನ್ನು ಕಸಾಯಿಖಾನೆಗೆ ಕಳುಹಿಸುವವರ ಮನ ಪರಿವರ್ತನೆ ಆಗಲಿದೆ. ಬದುಕಿದ್ದಾಗ ಗೋವು ಆರ್ಥಿಕವಾಗಿ ಎಷ್ಟು ಲಾಭವನ್ನು ನೀಡುತ್ತದೆಯೋ ಸತ್ತ ನಂತರವೂ ಅಷ್ಟೇ ಉಪಕಾರಿಯಾಗುತ್ತದೆ. ಅಲ್ಲದೆ, ಕೃಷಿ ಭೂಮಿಯ ಆರೋಗ್ಯವನ್ನು ಗೋನಂದಾಜಲದ ಮೂಲಕ ಕಾಪಾಡುತ್ತದೆ ಎಂದರು.

**ಗೋವಿನ ಉತ್ಪನ್ನಗಳಿಂದ ಚಿಕಿತ್ಸೆ:** ಸುಮಾರು ಐವತ್ತಕ್ಕೂ ಹೆಚ್ಚು ಗೋವಿನ ಉತ್ಪನ್ನಗಳನ್ನು ಸಿದ್ಧಗಿರಿ ಮಠದಲ್ಲಿ ತಯಾರಿಸಲಾಗುತ್ತಿದ್ದು, ಹೃದಯರೋಗ, ಕಿಡ್ನಿ ಸಮಸ್ಯೆ, ಡಯಾಬಿಟಿಸ್, ಉದರ ಸಂಬಂಧಿ ಕಾಯಿಲೆಗಳಿಗೆ ಚಿಕಿತ್ಸೆ ನೀಡುತ್ತಿರುವುದು ವಿಶೇಷವಾಗಿದೆ. ರಾಸಾಯನಿಕ ರಹಿತ ಕೃಷಿಗೆ ಹೆಚ್ಚು ಒತ್ತು ನೀಡಿ ಕೃಷಿ ಭೂಮಿಯ ಆರೋಗ್ಯ ಕಾಪಾಡುವ ಬಗ್ಗೆಯೂ ಮಠವು ಕೃಷಿ ವಿಜ್ಞಾನ ಕೇಂದ್ರದ ಸಹಯೋಗದೊಂದಿಗೆ ಕೆಲಸ ಮಾಡುತ್ತಿದೆ ಎಂದು ಹೇಳಿದರು.

**ಗೋನಂದಾಜಲ ಬಳಕೆ:** ಭೂಮಿಯ ಫಲವತ್ತತೆಯನ್ನು ಹೆಚ್ಚಿಸಲು ಕಾಂಪೋಸ್ಟ್, ವರ್ಮಿಕಾಂಪೋಸ್ಟ್, ಜೀವಾಮೃತ, ಗೋನಂದಾಜಲ ಬಳಕೆ ಮಾಡಬಹುದು. ಅದರಿಂದ ಹೆಚ್ಚು ಇಳುವರಿ ಬರುತ್ತದೆ. ಅಲ್ಲದೆ, ಸಗಣಿ ಉಪಯೋಗ ಮಾಡಿಕೊಂಡು ಇಲ್ಲಿ ಪೇಂಟ್ ಹಾಗೂ ವಾಲ್‌ಪುಟ್ಟಿ ತಯಾರು ಮಾಡಲಾಗುತ್ತಿದೆ. ಇದನ್ನೆಲ್ಲ ನಾವೂ ಪ್ರಾತ್ಯಕ್ಷಿಕೆ ಮೂಲಕ ನಮ್ಮ ರಾಜ್ಯದ ಗೋಶಾಲೆಗಳಿಗೆ ತಿಳಿಸುತ್ತೇವೆ ಎಂದು ಹೇಳಿದರು.

18-12-2021 Kp Pg 08

# ಎಥೆನಾಲ್ ಉತ್ಪಾದನೆಗೆ ಒತ್ತು ನೀಡಿ: ಬ್ರೆಜಿಲ್ ಅಸೋಸಿಯೇಶನ್ ಸಲಹೆ

## ರಾಜ್ಯದಲ್ಲಿ ಹೆಚ್ಚಿರುವ ಕಬ್ಬು ಬೆಳೆ | ಇದರಿಂದ ಆರ್ಥಿಕ ಪ್ರಗತಿ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಕರ್ನಾಟಕದಲ್ಲಿ ಕಬ್ಬು ಉತ್ಪಾದನೆ ಹೆಚ್ಚಳವಾಗುತ್ತಿದ್ದು, ಈ ಕಬ್ಬಿನಿಂದ ಎಥೆನಾಲ್ ಉತ್ಪಾದನೆಗೆ ಒತ್ತು ಕೊಡುವ ಮೂಲಕ ಹಸಿರು ಆರ್ಥಿಕತೆಗೆ ಮುಂದಾಗಬೇಕು ಎಂದು ಬ್ರೆಜಿಲ್ ಸಕ್ಕರೆ ಕಾರ್ಖಾನೆಗಳ ಅಸೋಸಿಯೇಶನ್ ಸಲಹೆ ನೀಡಿದೆ. ಇತ್ತೀಚೆಗೆ ದೇಶದಲ್ಲಿ ಕಬ್ಬು ಹೆಚ್ಚು ಬೆಳೆಯುವ ರಾಜ್ಯಗಳಲ್ಲಿ ಸಮೀಕ್ಷೆ ನಡೆಸಿರುವ ಈ ಅಸೋಸಿಯೇಶನ್ ತನ್ನ ಶಿಫಾರಸುಗಳನ್ನು ನೀಡಿದೆ. 'ಭಾರತವು ಇಂಗಾಲದ ಪ್ರಮಾಣವನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ 2025ರ ವೇಳೆಗೆ ಎಥೆನಾಲ್ ಬಳಕೆಯನ್ನು ಶೇ.20ರಷ್ಟು ತಲುಪುವ ಗುರಿಯನ್ನು ಹೊಂದಿದೆ. ಕಬ್ಬು ಕೂಡ ಎಥೆನಾಲ್ ಮೂಲವಾಗಿದ್ದು, ಅದನ್ನು ಪ್ರಮುಖ ಕಚ್ಚಾವಸ್ತುವಾಗಿ ಬಳಸಿಕೊಳ್ಳಲು ಭಾರತ ಮುಂದಾಗಬೇಕಿದೆ. ಕರ್ನಾಟಕ ಸೇರಿ ಉತ್ತರ ಪ್ರದೇಶ, ಮಹಾರಾಷ್ಟ್ರದಲ್ಲಿ ಬೇಡಿಕೆಗಿಂತ ಹೆಚ್ಚು ಕಬ್ಬು ಉತ್ಪಾದಿಸುತ್ತಿವೆ. ಸಕ್ಕರೆ ತಯಾರಿಗೆ ಸೀಮಿತವಾಗದೆ ಎಥೆನಾಲ್ ಉತ್ಪಾದನೆಗೆ ಮುಂದಾಗಬೇಕು. ಇದರಿಂದ ಕಬ್ಬು ಬೆಳೆಯುವ ಗ್ರಾಮೀಣ ಭಾಗಗಳು ಆರ್ಥಿಕವಾಗಿ ಬಲಿಷ್ಠವಾಗುವ ಜತೆಗೆ ಪರಿಸರ ಸಂರಕ್ಷಣೆಯು ಸಾಧ್ಯವಾಗುತ್ತದೆ ಎಂದಿದೆ.



ಕರ್ನಾಟಕ ಕಬ್ಬು ಬೆಳೆಯುವಲ್ಲಿ ದೇಶದಲ್ಲಿ 3ನೇ ಸ್ಥಾನವನ್ನು ಹೊಂದಿದೆ. ಬೆಳಗಾವಿ, ಬಾಗಲಕೋಟೆ, ಬಿಜಾಪುರ, ಮಂಡ್ಯ, ಮೈಸೂರು, ಚಾಮರಾಜನಗರ ಮತ್ತು ಬೀದರ್ ಸೇರಿ 16 ಜಿಲ್ಲೆಗಳಲ್ಲಿ ಕಬ್ಬು ಬೆಳೆಯಲಾಗುತ್ತದೆ. ರಾಜ್ಯದಲ್ಲಿ ಕಬ್ಬು ಉತ್ಪಾದನೆ 33.8 ಲಕ್ಷ ಟನ್‌ನಿಂದ 41.67 ಲಕ್ಷ ಟನ್‌ಗೆ ಹೆಚ್ಚಳವಾಗಿದೆ. ಎಥೆನಾಲ್ ಪೂರೈಕೆಯನ್ನು ತ್ವರಿತವಾಗಿ ಹೆಚ್ಚಿಸುವ ನಿಟ್ಟಿನಲ್ಲಿ ಬೇಕಾಗುವ ಎಲ್ಲಾ ಪರತ್ತುಗಳನ್ನು ಕರ್ನಾಟಕ ಹೊಂದಿದ್ದು, ಕಚ್ಚಾ ವಸ್ತುಗಳ ಉತ್ತಮ ಲಭ್ಯತೆ ಅವಕಾಶಗಳಿವೆ. ಅಲ್ಲದೆ, ಯೋಜನೆಯ ಅನುಷ್ಠಾನದ ವೆಚ್ಚವು ಕಡಿಮೆ ಮತ್ತು ಆರ್ಥಿಕವಾಗಿ ಕಾರ್ಯಸಾಧ್ಯವಾಗಿರುತ್ತದೆ ಎಂದು ಬ್ರೆಜಿಲ್ ಸಕ್ಕರೆ ಕಾರ್ಖಾನೆಗಳ ಅಸೋಸಿಯೇಶನ್ ಸಲಹೆ ನೀಡಿದೆ.

18-12-2021 Kp Pg 05

# ಕೃಷಿ ವಿವಿ ವಿಧೇಯಕ ಮಂಡನೆ

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ (ತಿದ್ದುಪಡಿ) ವಿಧೇಯಕ 2021ರನ್ನು ಶುಕ್ರವಾರ ವಿಧಾನಸಭೆಯಲ್ಲಿ ಮಂಡಲಿಸಲಾಯಿತು. ಕೃಷಿ ಮತ್ತು ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯ- ಶಿವಮೊಗ್ಗ ಹೊಸ ಕ್ಯಾಂಪಸ್ ಅನ್ನು ಸಾಗರ ತಾಲೂಕಿನ ಇರುವಕ್ಕಿಯಲ್ಲಿ ಸ್ಥಾಪಿಸಲಾಗಿದೆ. ಕರ್ನಾಟಕದ ಕೆಲವು ಸ್ಥಳಗಳ ಹೆಸರುಗಳನ್ನು ಬದಲಾಯಿಸುವ ಅಧಿನಿಯಮ ಆಂಗ್ಲ ಭಾಷಾ ಅಧಿನಿಯಮದಲ್ಲಿ 'ಶಿಮೊಗ' ಎಂದು ಮುದ್ರಿಸಲಾಗಿದೆ. ಇದನ್ನು 'ಶಿವಮೊಗ್ಗ' ಎಂದು ಓದಿಕೊಳ್ಳುವಂತೆ ಹೇಳಿದೆ.

**ಖಾಸಗಿ ನಿರ್ಣಯ ಮಂಡನೆ:** ದೇಸಿ ಪರಂಪರೆಯ ಆಯುರ್ವೇದ ವೈದ್ಯ ಪದ್ಧತಿಗೆ ಮನ್ನಣೆ ದೊರಕಿಸಿ, ಆಯುರ್ವೇದ ವೈದ್ಯ ಪದ್ಧತಿಗೆ ಪೂರಕವಾದ ನೀತಿ ರೂಪಿಸುವ ಕುರಿತು ಕಾಂಗ್ರೆಸ್‌ನ ಯು.ಬಿ.ವೆಂಕಟೇಶ ಪರಿಷತ್‌ನಲ್ಲಿ ಖಾಸಗಿ ನಿರ್ಣಯ ಮಂಡಿಸಿದರು.

18-12-2021 Vv Pg 11